# ಕಾಲು ನಿಕೃಷ್ಟವೆ?

ಕರಕುಶಲಕಲೆ ಎನ್ನುವುದಿದೆ. ಕಾಲುಗಳಿಗೆ ಸಂಬಂಧಿಸಿದಂತೆ ‘ಪಾದಕುಶಲಕಲೆ’ ಯಾಕಿಲ್ಲ? ನಮ್ಮ ಕೈಗಳು ಇನ್ನೊಬ್ಬರಿಗೆ ಆಕಸ್ಮಿಕವಾಗಿ ತಾಕಿದರೆ ಅದೇನೂ ದೊಡ್ಡ ಪ್ರಮಾದ ಎನಿಸುವುದಿಲ್ಲ; ಕಾಲುಗಳು ತಾಕಿದರೆ ಇರುಸುಮುರುಸು. ಯಾಕೆ ಹೀಗಾಗುತ್ತದೆ? ಕೈಯ ಸೋಕಿಗೆ ಇಲ್ಲದ ಸಮಸ್ಯೆ ಕಾಲಿಗೇಕೆ?

ಸಚಿವರೊಬ್ಬರಿಗೆ ಪಾದರಕ್ಷೆ ತೊಡಲು ಸಹಾಯಕರೊಬ್ಬರು ನೆರವಾದ ಘಟನೆ ಇತ್ತೀಚೆಗೆ ಸುದ್ದಿಯಾಗಿತ್ತು. ಇಂಥ ಘಟನೆಗಳು ದೇಶದ ವಿವಿಧ ಭಾಗಗಳಲ್ಲಿ ಆಗಾಗ ಪ್ರಕಟಗೊಳ್ಳುತ್ತಲೇ ಇರುತ್ತವೆ ಹಾಗೂ ಅವುಗಳನ್ನು ಅಧಿಕಾರ ಮದ ಹಾಗೂ ಫ್ಯೂಡಲ್ ಮನಸ್ಥಿತಿಯ ರೂಪದಲ್ಲಿ ವಿಶ್ಲೇಷಿಸಲಾಗುತ್ತದೆ. ಒಬ್ಬರ ಕಾಲುಗಳನ್ನು ಮತ್ತೊಬ್ಬರು ಮುಟ್ಟಿದರೆ ಅದು ಅವಮಾನ ಯಾಕಾಗಬೇಕು? ಕಾಲು ಅಧಮವೆಂದೆ? ನಮ್ಮ ಪಾದರಕ್ಷೆಗಳನ್ನು ನಾವೇ ತೊಡಬೇಕು ಎನ್ನುವುದೇನೋ ಸರಿ. ಹಾಗೆಂದು, ಮತ್ತೊಬ್ಬರು ತೊಡಿಸಿದರೆ ಅದನ್ನು ಅವಮಾನವೆಂದು ಯಾಕೆ ಭಾವಿಸಬೇಕು?

ಸದ್ಯದ ಜಿಜ್ಞಾಸೆ ಕಾಲಿಗೆ ಪಾದರಕ್ಷೆ ತೊಡಿಸುವುದು ಸರಿಯೋ ತಪ್ಪೋ ಎನ್ನುವುದರ ಕುರಿತಲ್ಲ; ಕಾಲಿನ ಕುರಿತಂತೆ ನಮ್ಮಲ್ಲಿರುವ ನಿರ್ಲಕ್ಷ್ಯ ಹಾಗೂ ಋಣಾತ್ಮಕ ಮನೋಭಾವ ಯಾಕೆನ್ನುವುದು ಇಲ್ಲಿನ ಜಿಜ್ಞಾಸೆ. ಹಾಗೆ ನೋಡಿದರೆ, ಮನುಷ್ಯನ ಯಾವ ಅಂಗವನ್ನೂ ಇನ್ನೊಂದಕ್ಕೆ ಹೋಲಿಸಿ ಮುಖ್ಯವೆಂದೋ ಅಮುಖ್ಯವೆಂದೋ ಹೇಳಲಾಗದು. ಕೈಗಳಿಗೆ ಹೋಲಿಸಿದರೆ, ಕಾಲು ಯಾವ ರೀತಿಯಲ್ಲೂ ಕಡಿಮೆಯಾದುದಲ್ಲ. ಚಲನೆ ಈ ಲೋಕದ ಜೀವಂತಿಕೆಯ ಕುರುಹು ಹಾಗೂ ಮನುಷ್ಯ ಚಲನಶೀಲನಾಗಿರುವುದು ಕಾಲುಗಳಿಂದಲೇ ಎನ್ನುವ ಸಂಗತಿಯೊಂದೇ ಸಾಕು, ಕಾಲುಗಳ ಕುರಿತಾದ ನಮ್ಮ ಪೂರ್ವಗ್ರಹವನ್ನು ತಿಳಿಗೊಳಿಸುವುದಕ್ಕೆ.

ಕಾಲಿನ ಮುಖ್ಯ ಉಪಯೋಗ ನಡಿಗೆ. ನಡೆಯುವುದರಿಂದ ಆರೋಗ್ಯಲಾಭವಷ್ಟೇ ಅಲ್ಲ, ಅರಿವಿನ ಸಂಪಾದನೆಯೂ ಆಗುತ್ತದೆ. ನಡೆಯುವಾಗ ಪ್ರಕೃತಿಯೊಂದಿಗಿನ ಸಂವಾದವೂ ಸಾಧ್ಯ. ಹಸುರು, ಹಕ್ಕಿಯುಲಿ, ತಂಗಾಳಿ, ಹೂಗಳ ಪರಿಮಳ – ಇವೆಲ್ಲವೂ ಇಂದ್ರಿಯಗಳನ್ನು ಸೃಜನಶೀಲಗೊಳಿಸುವಂತಹವೇ ಆಗಿವೆ. ನಡೆಯುವಾಗ ಮೈ ಸಡಿಲಗೊಂಡಂತೆ ಮನಸ್ಸು ಹಗುರಗೊಳ್ಳುತ್ತದೆ. ನಡಿಗೆ, ಅಧ್ಯಾತ್ಮದ ಪಯಣವೂ ಹೌದು. ಭೋಗದ ಉತ್ತುಂಗದಲ್ಲಿ ಮೀಯುತ್ತಿದ್ದವರು ಇದ್ದಕ್ಕಿದ್ದಂತೆ ಕಾಡಿನತ್ತ ಕಾಲು ಬೆಳೆಸಿದ ಹಲವು ಪ್ರಸಂಗಗಳು ಪುರಾಣಗಳಲ್ಲಿವೆ. ಹಲವು ವಿಷಯಗಳಲ್ಲಿ ನಮಗೆ ಮಾದರಿಯಂತೆ ಒದಗಿಬರುವ ಗಾಂಧಿ ಮಹಾತ್ಮ, ನಡಿಗೆಗೆ ರಾಯಭಾರಿಯೂ ಹೌದು. ಅವರ ಮುಂಜಾನೆಯ ನಡಿಗೆಗಳು ಅರಿವಿನ ಸಾಕ್ಷಾತ್ಕಾರದ ಹೆಜ್ಜೆಗಳೂ ಆಗಿದ್ದವು. ನಡಿಗೆಗೆ ಜೊತೆಗಾರರಿದ್ದಲ್ಲಿ ವಿಚಾರ ವಿನಿಮಯವಾಗುತ್ತಿತ್ತು. ದಾರಿಯಲ್ಲೆಲ್ಲಾದರೂ ಮನುಷ್ಯ ತ್ಯಾಜ್ಯಗಳು ಕಾಣಿಸಿದರೆ, ಮಣ್ಣು ಮುಚ್ಚುವ ಜಲಗಾರನೂ ಆಗುತ್ತಿದ್ದರು. ಗಾಂಧಿಯವರ ಪಾಲಿಗೆ ಸತ್ಯ ಸಾಕ್ಷಾತ್ಕಾರಕ್ಕೆ ಒದಗಿಬಂದ ನಡಿಗೆ, ಸತ್ಯಾಗ್ರಹದ ಮಾರ್ಗವಾಗಿಯೂ ಪರಿಣಮಿಸಿತ್ತು. ‘ದಾಂಡಿ ಯಾತ್ರೆ’ಗಿಂತಲೂ ಬೇರೆ ನಿದರ್ಶನ ಬೇಕೆ? ಸಾಬರಮತಿ ಆಶ್ರಮದಿಂದ ದಾಂಡಿಯ ಕಡಲ ತೀರದವರೆಗಿನ 240 ಮೈಲಿಗಳ ದೂರವನ್ನು ಗಾಂಧಿ ಮತ್ತು ಅವರ ಸಂಗಡಿಗರು ನಡೆದೇ ಕ್ರಮಿಸಿದರು (1930ರ ಮಾರ್ಚ್ 12ರಿಂದ ಏಪ್ರಿಲ್ 6ರವರೆಗಿನ ಅವಧಿಯಲ್ಲಿ). ದಾರಿಯುದ್ದಕ್ಕೂ ಸ್ವಾತಂತ್ರ್ಯದ ಅರಿವನ್ನು ಹಂಚಿದರು. ಉಪ್ಪಿನ ಮೇಲೆ ಹೇರಿದ್ದ ಕರವನ್ನು ವಿರೋಧಿಸಿ, ದಾಂಡಿ ಕಡಲತೀರದಲ್ಲಿ ಉಪ್ಪು ತಯಾರಿಸಿದರು.

ಸ್ವಾತಂತ್ರ್ಯದ ನಡಿಗೆಯಂತೆ ‘ಭಕ್ತಿ ನಡಿಗೆ’ಯೂ ಇದೆ. ಹಿಂದೆಲ್ಲ ತೀರ್ಥಯಾತ್ರೆ ನಡೆಯುತ್ತಿದ್ದುದು ಕಾಲ್ನಡಿಗೆಯಲ್ಲಿಯೇ. ದಿಗಂಬರ ಜೈನಮುನಿಗಳಂತೂ ಸಂಪರ್ಕ ಕ್ರಾಂತಿಯ ಈ ಕಾಲದಲ್ಲೂ ಕಾಲನ್ನೇ ನೆಚ್ಚಿದವರು. ‘ಎಲ್ಲಿಯೂ ನಿಲ್ಲದಿರು’ ಎನ್ನುವ ತತ್ವಕ್ಕೆ ಬದ್ಧರಾದವರು.

ಪಾದಯಾತ್ರೆ ಮತ್ತು ಪಾದಪೂಜೆ – ಎರಡೂ ಕಾಲಿಗೆ ಸಂಬಂಧಿಸಿದವು. ಭೌತಿಕಪೂಜೆ ಮಾಡಲಿಕ್ಕೆ ಕೈಗಳು ಬೇಕಾದರೂ, ಅದು ಸಲ್ಲುವುದೇನಿದ್ದರೂ ಪಾದಪದ್ಮಗಳಿಗೇನೆ. ಭಕ್ತರು ಪಾದಯಾತ್ರೆ ಕೈಗೊಂಡರೆ ಅದು ತೀರ್ಥಯಾತ್ರೆ ಎನ್ನಿಸಿಕೊಳ್ಳುತ್ತದೆ; ರಾಜಕೀಯ ಅಥವಾ ಧಾರ್ಮಿಕ ಮುಖಂಡರು ಕೈಗೊಂಡಾಗ ಪಾದಯಾತ್ರೆಯೆಂದೇ ಕರೆಸಿಕೊಂಡರೂ, ಎರಡರ ಉದ್ದೇಶ ಭಿನ್ನವಾಗಿರುತ್ತದೆ. ರಾಜಕಾರಣಿಗಳ ಪಾದಯಾತ್ರೆ ಜನರ ವಿಶ್ವಾಸ ಗಳಿಸುವ ಮಾರ್ಗವಾಗಿದ್ದರೆ, ಧರ್ಮಗುರುಗಳ ನಡಿಗೆ ಧರ್ಮ ಮತ್ತು ಮೌಲ್ಯಗಳ ಪ್ರಸರಣವಾಗಿರುತ್ತದೆ. ‘ಭಾರತ್ ಜೋಡೊ’ ಹೆಸರಿನಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನಡೆಸಿದ ಪಾದಯಾತ್ರೆಯಲ್ಲಿ ರಾಜಕಾರಣ ಲಾಭದ ಉದ್ದೇಶವೂ ಇತ್ತು, ಜನಮನವನ್ನು ಅರಿಯುವ ಹಂಬಲವೂ ಇತ್ತು. ನಡೆಯದೆ ಕೆಟ್ಟ ಜನಪ್ರತಿನಿಧಿಗಳ ಉದಾಹರಣೆಗಳಿವೆಯೇ ಹೊರತು, ನಡೆದು ಕೆಟ್ಟ ರಾಜಕಾರಣಿಗಳ ಉದಾಹರಣೆಗಳಿಲ್ಲ. ನಡೆಯುವುದೆಂದರೆ, ಜನರೊಂದಿಗೆ ಇರುವುದು, ಅವರಿಗೆ ಹತ್ತಿರವಾಗುವುದು. ರಾಜಕಾರಣಿಗಳ ಪಾದಯಾತ್ರೆ ಶಕ್ತಿ ಪ್ರದರ್ಶನ ಅಥವಾ ಸಂಪಾದನೆಯ ಅಭಿವ್ಯಕ್ತಿಯಾಗಿದ್ದರೆ, ಮತ್ತೊಂದು ಭಕ್ತಿಯ ಅಭಿವ್ಯಕ್ತಿಯಾಗಿರುತ್ತದೆ. ಈ ಭಕ್ತಿಯ ವ್ಯಕ್ತರೂಪದಲ್ಲೇ ಪಾದಪೂಜೆಯನ್ನು ನೋಡಬೇಕು. ಗುರುಗಳಿಗೆ, ಧರ್ಮಗುರುಗಳಿಗೆ ಸಲ್ಲುವಂತಹದ್ದು ಪಾದಪೂಜೆ; ಪಾದಗಳನ್ನು ತೊಳೆದು ಪೂಜಿಸುವ ಗೌರವವದು. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಬೂಟು ತೊಡಿಸಿದಾಗ ಎದುರಾಗುವ ಆಕ್ಷೇಪಗಳು, ಪಾದಪೂಜೆ ಸಂದರ್ಭದಲ್ಲಿ ಗೌಣವೆನ್ನಿಸುತ್ತವೆ.

ಸಾಮಾನ್ಯವಾಗಿ ಪಾದಯಾತ್ರೆಯೊಂದಿಗೆ ಸಂಭ್ರಮ ತಳುಕು ಹಾಕಿಕೊಂಡಿರುತ್ತದೆ. ಕೆಲವೊಮ್ಮೆ, ಸಂಭ್ರಮದ ಬದಲಿಗೆ ವಿಷಣ್ಣತೆ, ಅಸಹಾಯಕತೆ ಇರುವುದೂ ಇದೆ. ಉಳ್ಳವರಿಗೆ ವಾಹನಯೋಗ; ಬಡವರಿಗೆ ಕಾಲೇ ಮೋಟಾರು. ಕೊರೊನಾ ತೀವ್ರತೆಯ ಲಾಕ್‌ಡೌನ್ ಸಂದರ್ಭದಲ್ಲಿ, ದೇಶದ ವಿವಿಧ ನಗರಗಳಿಂದ ಲಕ್ಷಾಂತರ ಕಾರ್ಮಿಕರು ತಮ್ಮೂರುಗಳತ್ತ ನಡೆದುಕೊಂಡೇ ಹೊರಟಿದ್ದರು. ನೂರಾರು ಮೈಲಿಯ ದಾರಿಯನ್ನು ನಡೆದೇ ಸವೆಸುವಾಗ, ಸಾವುನೋವು ಸಂಭವಿಸಿದ್ದವು.

ಈಗ ಮತ್ತದೇ ಪ್ರಶ್ನೆ – ಒಬ್ಬರಿಗೆ ಮತ್ತೊಬ್ಬರು ಪಾದರಕ್ಷೆ ತೊಡಿಸುವುದು ಅಮಾನವೀಯ ನಡವಳಿಕೆಯೆ? ಈ ಪ್ರಶ್ನೆಗೆ ಉತ್ತರ ಹೀಗಿರಬಹುದು: ಸಾಮಾಜಿಕವಾಗಿ ಇಬ್ಬರೂ ಸಮಾನಸ್ಕಂದರಾಗಿದ್ದಾಗ ಪಾದರಕ್ಷೆ ತೊಡಿಸುವುದು ತಪ್ಪೆನ್ನಿಸದಿರಬಹುದು. ಸಾಮಾಜಿಕ ಸ್ಥಾನಮಾನ ಭಿನ್ನವಾಗಿದ್ದಾಗ, ಕಾಲು ಮುಟ್ಟುವುದಷ್ಟೇ ಸಮಸ್ಯೆಯಲ್ಲ; ಎದುರಿಗೆ ಕೈಕಟ್ಟಿಕೊಂಡು ನಿಲ್ಲುವ ದೈನ್ಯವೂ ಅಸಹನೀಯವೇ. ಸಮಸ್ಯೆ ಇರುವುದು ಕಾಲಿನಲ್ಲೋ ಪಾದರಕ್ಷೆಯಲ್ಲೋ ಅಲ್ಲ; ಕಾಲು ಕೊಡುವವರ ಮತ್ತು ಮುಟ್ಟುವವರ ಮನಸ್ಥಿತಿಯಲ್ಲಿ ಹಾಗೂ ಆ ಮನಸ್ಥಿತಿಗೆ ಕಾರಣವಾದ ಸಾಮಾಜಿಕ ಸ್ಥಾನಮಾನದಲ್ಲಿ.

■ **ಚಂಪಕಮಾಲಾ**

## ಮಾತೇ ಮುತ್ತು

- ಮೇಧಾವಿ ಮತ್ತು ಮೂರ್ಖ ಮಾತ್ರ ಮಾನವ ಕಟ್ಟಿಕೊಂಡಿರುವ ಎಲ್ಲೆಗಳನ್ನು ಮೀರಬಲ್ಲರು. ಅದಕ್ಕೇ ಅವರ ಬಗ್ಗೆ ದೇವರಿಗೆ ತುಂಬ ಅಕ್ಕರೆ.
  —ಖಲೀಲ್ ಗಿಬ್ರಾನ್
- ನಿಮಗೆ ನಿಜವಾಗಿಯೂ ನಗಲು ಸಾಧ್ಯ ಆಗಬೇಕು ಎನ್ನುವುದಾದರೆ, ನಿಮ್ಮ ನೋವನ್ನು ಸಹಿಸುವುದು ಮತ್ತು ಅದರೊಂದಿಗೆ ಆಟವಾಡುವುದು ನಿಮಗೆ ಗೊತ್ತಿರಬೇಕು.
  —ಚಾಪ್ಲಿನ್
- ಜನರಿಗೆ ಹಿರಿಯರಿಂದ ಬರುವ ಆಸ್ತಿಯಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.
  —ಬಿ.ಎಂ. ಶ್ರೀಕಂಠಯ್ಯ
- ಬರಲಿರುವ ಸನ್ನಿವೇಶಗಳನ್ನು ಸದಾ ನಿಮ್ಮ ಪರವಾಗಿ ಇಟ್ಟುಕೊಳ್ಳುವುದು ಜಾಣತನ.
  —ವಿ.ಕೃ. ಗೋಕಾಕ್